# ನಿಮ್ಮ ಮಕ್ಕಳು ‘ಓದು’ತ್ತಾರಾ?

## ಶಾಲೆಗೆ ಹೋಗುವ ಮಕ್ಕಳು ಕಥೆ ಪುಸ್ತಕಗಳನ್ನು ಓದತೊಡಗಿದರೆ ಪರೀಕ್ಷೆಯಲ್ಲಿ ಕಡಿಮೆ ಅಂಕಗಳು ಬರುತ್ತವಾ! ಯಾರು ಹಾಗೆಂದವರು?

■ ಡಾ.ಕೆ.ಎಸ್. ಪವಿತ್ರ
ಚಿತ್ರ: ಕೇಶವ ವಿಟ್ಲ

ಓ, ದಯವಿಟ್ಟು, ದಯೆಯಿಟ್ಟು ನಿಮ್ಮ ‘ಟಿ.ವಿ.’ಯನ್ನು ಎಸೆದುಬಿಡಿ. ಅದರ ಬದಲು, ಅದರ ಬದಲು, ಪುಸ್ತಕ ಮನೆಯೊಂದನ್ನು ಕಟ್ಟಿಬಿಡಿ !

––ಹೀಗೆಂದವನು ಮಕ್ಕಳ ಸಾಹಿತ್ಯದ ಧೀಮಂತ ಸಾಹಿತಿ ರುವಾಲ್ಡ್ ಡಾಲ್. ನಾರ್ವೆಯಲ್ಲಿ ಜನಿಸಿದ ರುವಾಲ್ಡ್ ಡಾಲ್ ಸೇನೆಯಲ್ಲಿದ್ದ ಒಬ್ಬ ಫ್ಲೈಯಿಂಗ್ ಆಫೀಸರ್. ಆದರೆ ಆತನ ವಿಶೇಷ ಕೇವಲ ಆಕಾಶದಲ್ಲಿ ಯುದ್ಧ ಮಾಡುತ್ತಾ ಹಾರಾಡುವುದಷ್ಟೇ ಅಲ್ಲ, ಮಕ್ಕಳನ್ನು ರೆಕ್ಕೆ ಕಟ್ಟಿ ಹಾರಾಡಿಸಿದ್ದು! ಅಂದರೆ 20ನೇ ಶತಮಾನ ಕಂಡ ಒಬ್ಬ ಮಹಾನ್ ಮಕ್ಕಳ ಕಥೆಗಾರ ಆತ. ರುವಾಲ್ಡ್ ಡಾಲ್‌ನ ಪುಸ್ತಕಗಳಲ್ಲಿ ಬರುವ ‘ಮಟಿಲ್ಡಾ’ ಎಂಬ ಬಾಲಕಿಯನ್ನು ವರ್ಣಿಸುತ್ತಾ ಡಾಲ್ ಹೇಳುವುದು ‘ಪುಸ್ತಕಗಳು ಮಟಿಲ್ಡಾಳನ್ನು ಹೊಸ ಜಗತ್ತುಗಳಿಗೆ ಕೊಂಡೊಯ್ದುವು. ವಿಚಿತ್ರ –ಅದ್ಭುತ ವ್ಯಕ್ತಿಗಳನ್ನು ಆಕೆ ಭೇಟಿ ಮಾಡಿದಳು. ಒಂದು ದಿನ ಹಡಗಿನಲ್ಲಿ ಜೋಸೆಫ್ ಕೊನ್ರಾಡ್‌ನ ಜೊತೆ ಹೋದರೆ, ಮತ್ತೊಂದು ದಿನ ಹೆಮಿಂಗ್ ವೇ ಜೊತೆಗೆ ಆಫ್ರಿಕಾಕ್ಕೆ, ಮಗದೊಮ್ಮೆ ಕಿಪ್ಲಿಂಗ್‌ನ ಜೊತೆ ಇಂಡಿಯಾಕ್ಕೆ! ತನ್ನ ಪುಟ್ಟ ಹಳ್ಳಿಯಲ್ಲಿ ಚಿಕ್ಕ ಕೋಣೆಯೊಂದರಲ್ಲಿ ಕುಳಿತು, ಮಟಿಲ್ಡಾ ಇಡೀ ಜಗತ್ತನ್ನು ಸುತ್ತಿದಳು’.

ಮಕ್ಕಳನ್ನು ಬಹುವಾಗಿ ಪ್ರೀತಿಸಿದ ರುವಾಲ್ಡ್ ಡಾಲ್ ಹೇಳಿದ್ದು– “ಮಕ್ಕಳು ಓದುಗರಾಗುವಂತೆ ಮಾಡುವುದು ನನ್ನ ‘ಹುಚ್ಚು’, ಮಕ್ಕಳು ಪುಸ್ತಕಗಳೆಂದರೆ ಹೆದರಬಾರದು, ಅವುಗಳನ್ನು ಆನಂದಿಸಬೇಕು. ಅವುಗಳಿಂದ ಉದ್ವೇಗ–, ಉತ್ಸಾಹ, ದುಃಖ, ಸಂತಸಗಳನ್ನು ಅನುಭವಿಸಬೇಕು. ‘ಓದುಗ’ನಾಗುವುದೂ ಒಂದು ಮಹತ್ವದ ಜೀವನ ಕಲೆ.” ಡಾಲ್‌ನ ಈ ಮಾತುಗಳನ್ನು ಮತ್ತೆ ಮತ್ತೆ ನಾವು ನೆನೆಯಬೇಕಾಗಿದೆ.

ಇಂದಿನ ಮಕ್ಕಳು ಪುಸ್ತಕ ಓದುತ್ತಾರೆಯೇ? ಓದುತ್ತಲೇ ಇರುತ್ತಾರೆ ಎನ್ನುತ್ತೀರಾ? ಪುಸ್ತಕ ಎಂದರೆ ಪಠ್ಯಪುಸ್ತಕ ಅಲ್ಲ! ಪಠ್ಯದ ಹೊರತಾಗಿ ಇರುವ ಅಸಂಖ್ಯ ಪುಸ್ತಕಗಳು. ಹೆಚ್ಚಿನ ಮಕ್ಕಳ ಉತ್ತರ ‘ಮೌನ’ವೇ! ಮಕ್ಕಳು ಸರಾಗವಾಗಿ ಓದಲು ಕಲಿಯುವ ಹೊತ್ತಿಗೆ ಎರಡು, ಮೂರನೇ ಕ್ಲಾಸು ಕಳೆದಿರುತ್ತದೆ. ಸ್ವಲ್ಪ ಓದಿನ ಅಭಿರುಚಿ ಬೆಳೆಯುವ ಹೊತ್ತಿಗೆ, ಹದಿಹರೆಯ. 6ನೇ ಕ್ಲಾಸಿನ ‘ಓದುವ ಬಿಸಿ’, ‘ಅಂಕ ಗಳಿಸಲೇಬೇಕಾದ ಒತ್ತಡ’ ಇವೆರಡೂ ಸೇರಿ ಕಥೆ ಪುಸ್ತಕ ಕೈಯ್ಯಲ್ಲಿ ಹಿಡಿಯಲು ಪುರುಸೊತ್ತೇ ಇರುವುದಿಲ್ಲ!

ಪುಸ್ತಕಗಳನ್ನು ಓದದೆ ನಮ್ಮ ಮಕ್ಕಳು ತಮ್ಮ ಬಾಲ್ಯದ ಒಂದು ರಸಮಯ ಭಾಗವನ್ನೇ ಕಳೆದುಕೊಳ್ಳುತ್ತಿದ್ದಾರೆ. ವಿವಿಧ ‘ಪೆಟ್ಟಿಗೆ’ ಗಳ ಒಳಗೆ (ಟಿ.ವಿ., ಇ ಪ್ಯಾಡ್, ಐಪ್ಯಾಡ್, ಸ್ಮಾರ್ಟ್ ಫೋನ್ ಇತ್ಯಾದಿ ) ಹುದುಗಿ, ದೃಷ್ಟಿ ವಿಶಾಲಗೊಳ್ಳುವುದರ ಬದಲಾಗಿ ‘ಸಮೀಪದೃಷ್ಟಿ ದೋಷ’ ಹೊಂದುತ್ತಿದ್ದಾರೆ! ಏಕಾಗ್ರತೆಯ ಅವಧಿ ಮಕ್ಕಳಲ್ಲಿ ಕಡಿಮೆಯಾಗುವುದರ ಬಗ್ಗೆ ಮಕ್ಕಳ ತಜ್ಞರು ತಲೆ ಕೆಡಿಸಿಕೊಳ್ಳುತ್ತಿದ್ದಾರೆ. ದೃಶ್ಯ– ಶ್ರವಣ ಮಾಧ್ಯಮಗಳನ್ನು ಒಳಗೊಂಡು ಕಥೆಯನ್ನು ಆಕರ್ಷಕವಾಗಿಸುವುದು ಮಕ್ಕಳ ಅರಿವನ್ನು ಹೆಚ್ಚಿಸುತ್ತಿಲ್ಲ, ಒತ್ತಡವನ್ನೂ ಕಡಿಮೆಯಾಗಿಸಿಲ್ಲ. ತಾವೇ ಕಲ್ಪಿಸಿಕೊಳ್ಳುವ, ತಮ್ಮದೇ ಜಗತ್ತಿನಲ್ಲಿ ಪಾತ್ರಗಳಿಗೆ ಬಣ್ಣ ಹಚ್ಚುವ, ತಮಗೆ ಬೇಕಾದಂತೆ ಹಾರಾಡುವ ಸ್ವಾತಂತ್ರ್ಯವನ್ನು ‘ದೃಶ್ಯ ಶ್ರವಣ’ ದ ಆಯಾಮಗಳು ಕಡಿದು ಹಾಕಿವೆ ! ಮಿದುಳಿನ ಕ್ರಿಯಾಶೀಲತೆಯ ಸ್ವಾತಂತ್ರ್ಯವನ್ನೇ ಅಪಹರಿಸಿವೆ !

ಪುಸ್ತಕ ಓದುವುದು, ಸಾಹಿತ್ಯವನ್ನು ಸವಿಯುವುದು ಮಕ್ಕಳಿಗೆ ವಿವಿಧ ರೀತಿಗಳಲ್ಲಿ ಉಪಯೋಗವಾಗುತ್ತದೆ ಎಂಬುದನ್ನು ನಾವೆಲ್ಲರೂ ಒಪ್ಪುತ್ತೇವೆ. ಆದರೆ ನಮ್ಮ ಬಾಲ್ಯವನ್ನು ನಾವು ಮಕ್ಕಳೊಡನೆ ಹಂಚಿಕೊಳ್ಳದೆ, ತಮ್ಮ ಓದು ತಮಗೆ ನೀಡಿದ ಆನಂದವನ್ನು ಹಿರಿಯರು ಬರೆಹದ ಮೂಲಕ ದಾಖಲಿಸಿ, ಇಂದಿನ ತಲೆಮಾರಿಗೆ ದಾಟಿಸದ ಹೊರತು ‘ಪುಸ್ತಕ ಓದಿ’ ಎಂಬುದು ಬರೀ ಬೋಧನೆಯಾಗಿ ಉಳಿದೀತು. ಮಕ್ಕಳ ಮುಂದಿನ ಗುರಿ (ಅಥವಾ ಅವರ ಅಪ್ಪ–– ಅಮ್ಮನ ಗುರಿ !) ಏನೇ ಇರಲಿ, ಅದು ವಿಜ್ಞಾನದ ವಿಷಯಗಳಾದ ವೈದ್ಯಕೀಯ–, ಇಂಜಿನಿಯರಿಂಗ್‌ಗಳೇ ಆಗಿರಲಿ, ಸಾಹಿತ್ಯದ ಓದು ಅಂದರೆ ಮಕ್ಕಳ ಭಾಷೆಯಲ್ಲಿ ಸರಳವಾಗಿ ಹೇಳುವುದಾದರೆ ‘ಕಥೆ ಪುಸ್ತಕ ಓದುವುದು’ ಬೇಕೇ ಬೇಕು.

ಈ ಬಗ್ಗೆ ಪ್ರಸಿದ್ಧ ಮಕ್ಕಳ ನರರೋಗ ಶಸ್ತ್ರ ಚಿಕಿತ್ಸಾ ತಜ್ಞ ಬೆಂಜಮಿನ್ ಕಾರ್ಸನ್‌ನ ಬಾಲ್ಯದ ಸಂದರ್ಭವನ್ನು ಗಮನಿಸಲೇಬೇಕು. ಬೆಂಜಮಿನ್ ಕಾರ್ಸನ್ ತಂದೆ–ತಾಯಿಗೆ ಇಬ್ಬರೇ ಮಕ್ಕಳು. ವಿಚ್ಛೇದಿತ ತಾಯಿ ಮನೆಕೆಲಸ ಮಾಡಿ ಮಕ್ಕಳನ್ನು ಸಾಕುತ್ತಿರುತ್ತಾಳೆ. ಬೆಂಜಮಿನ್ ಮತ್ತು ಅವನ ತಮ್ಮನಿಗೆ ಸದಾ ಟಿ.ವಿ. ಹುಚ್ಚು. ಶಾಲೆಯಲ್ಲಿ ಅಂಕ ಕಡಿಮೆ ತೆಗೆದರೂ ಅವರಿಗೇನೂ ಬೇಸರವೆನಿಸುತ್ತಿರಲಿಲ್ಲ! ಒಂದು ದಿನ ಅವರ ತಾಯಿ (ಆಕೆ ಓದಿದ್ದು ಕೇವಲ 3ನೇ ತರಗತಿ, ಆದರೆ ಅವಳು ಬುದ್ಧಿವಂತೆ) ತಾನು ಕೆಲಸ ಮಾಡುತ್ತಿದ್ದ ಮನೆಯಲ್ಲಿ ಪುಸ್ತಕಗಳನ್ನು ಗಮನಿಸಿದಳು. ಮನೆಗೆ ಬಂದವಳೇ ಟಿ.ವಿ. ಆರಿಸಿ, ‘ನೀವು ಮಕ್ಕಳಿಬ್ಬರೂ ಪ್ರತಿವಾರ 2 ಪುಸ್ತಕಗಳನ್ನು ಓದಿ, ನನಗೆ ಅದರ ಬಗ್ಗೆ ಹೇಳಬೇಕು’ ಎಂದಳು. ಮಕ್ಕಳಿಬ್ಬರಿಗೂ ಅಸಮಾಧಾನ. ಬೇರೆ ಮಕ್ಕಳೆಲ್ಲರೂ ಟಿ.ವಿ. ನೋಡುತ್ತಿರುವಾಗ, ತಾವು ಮಾತ್ರ ‘ಓದ’ಬೇಕು ಎಂದು ಬೇಸರ. ಅಮ್ಮ ಈ ಹೊಸ ‘ಐಡಿಯಾ’ ಮರೆತು ಬಿಡುತ್ತಾಳೆ ಎಂದುಕೊಂಡರು. ಅದರೊಂದಿಗೇ ಅವರ ಮನೆಯಲ್ಲಿ ಅಮ್ಮನ ಬೈಬಲ್ ಬಿಟ್ಟರೆ ಬೇರೆ ಯಾವ ಪುಸ್ತಕವೂ ಇರಲಿಲ್ಲ!

ಆದರೆ ಅಮ್ಮ ಮರೆತು ಬಿಡಲಿಲ್ಲ. ಬರಲೊಪ್ಪದ ಮಕ್ಕಳನ್ನು ಆಕೆ ಎಳೆದುಕೊಂಡು ಹೋದದ್ದು ಪುಸ್ತಕಗಳು ಇರುವಲ್ಲಿಗೆ! ಬೆಂಜಮಿನ್ ಮೊದಲ ದಿನ ಮನಸ್ಸಿಲ್ಲದ ಮನಸ್ಸಿನಿಂದ ಮಕ್ಕಳ ಪುಸ್ತಕಗಳ ವಿಭಾಗದಲ್ಲಿ ಅಲೆದಾಡಿದ. ಅವನಿಗೆ ಪ್ರಾಣಿಗಳೆಂದರೆ ಇಷ್ಟವಾಗಿತ್ತು. ಹಾಗಾಗಿ ಪ್ರಾಣಿಗಳ ಪುಸ್ತಕದೆಡೆಗೆ ಕಣ್ಣು ಹಾಯಿಸಿದ. ಅದು ‘ಬೀವರ್’ ಎಂಬ ಪ್ರಾಣಿಗಳ ಬದುಕಿನ ಬಗೆಗಾಗಿತ್ತು. ಅವನ ಜೀವನದಲ್ಲಿ ಮೊದಲ ಬಾರಿ ಹೊಸತೊಂದು ಪ್ರಪಂಚ ತೆರೆದುಕೊಂಡಿತ್ತು. ಯಾವ ಟಿ.ವಿ. ಸೀರಿಯಲ್ ಕೂಡ ಆತನನ್ನು ವಾತಾವರಣದಿಂದ ಅಷ್ಟು ದೂರದ ಹೊಸ ಪ್ರಪಂಚಕ್ಕೆ ಕರೆದೊಯ್ದಿರಲಿಲ್ಲ. ಪ್ರತಿ ಗ್ರಂಥಾಲಯದ ಭೇಟಿಯೂ ಹೊಸ ಹೊಸತನ್ನು ಮಿದುಳಿಗೆ ನೀಡುತ್ತಿತ್ತು. ಪುಸ್ತಕದ ಹೊದಿಕೆಯೊಳಗೆ ಅದೆಷ್ಟೋ ಪ್ರಪಂಚಗಳೇ ಅಡಗಿದ್ದವು. ಆತ ಅವುಗಳಲ್ಲಿ ಓಡಾಡಲು ಸರ್ವ ಸ್ವತಂತ್ರ!

